# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ

**ಸೂಚನೆ:**

ದೇಶದ ಒಟ್ಟಾರೆ ಜನಸಂಖ್ಯೆಯ ಪೈಕಿ ಅಂದಾಜು 110 ಕೋಟಿ ಜನರು ಮೊಬೈಲ್ ಸಂಪರ್ಕವನ್ನು ಹೊಂದಿದ್ದು, ಇಂದಿನ ದಿನಗಳಲ್ಲಿ ಜನರು ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳಿಗಿಂತ ಡಿಜಿಟಲ್ ಮಾಧ್ಯಮಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವೃತ್ತಿಪರ ಡಿಜಿಟಲ್ ವೆಬ್ ನ್ಯೂಸ್ ಪೋರ್ಟಲ್ ನಡೆಸುತ್ತಿರುವ ಹತ್ತಾರು ಪತ್ರಿಕೆಗಳಿಗೆ ಸರ್ಕಾರದ ಜಾಹೀರಾತುಗಳ ಮೂಲಕ ಆರ್ಥಿಕ ಸಂಪನ್ಮೂಲ ಒದಗಿಸಿ ಪತ್ರಿಕೋದ್ಯಮಿಗಳ ನೆರವಿಗೆ ಸರ್ಕಾರ ಧಾವಿಸಲು ಕರ್ನಾಟಕದಲ್ಲಿ ಜಾಹಿರಾತು ನೀತಿಯೊಂದನ್ನು ಜಾರಿಗೆ ತರುವ ಕುರಿತು ನಿಯಮ 72ರ ಅಡಿಯಲ್ಲಿ ಗಮನ ಸೆಳೆಯಬಯಸುತ್ತೇನೆ.

**ಉತ್ತರ :**

ದೇಶದಲ್ಲಿ ಹಲವಾರು ಡಿಜಿಟಲ್ ಮಾಧ್ಯಮ (ವೆಬ್ ಪೋರ್ಟಲ್/ ನ್ಯೂಸ್ ಪೋರ್ಟಲ್, ಯೂಟ್ಯೂಬ್ ವಾಹಿನಿಗಳು) ಗಳು ಪ್ರಸಾರ ಹೊಂದಿದ್ದು ಇವುಗಳ ನೋಂದಣಿಗೆ ಪ್ರಸ್ತುತ ರಾಜ್ಯ ಸರ್ಕಾರದಿಂದ ಸೂಕ್ತ ಮಾನದಂಡಗಳು ಮತ್ತು ಮಾರ್ಗಸೂಚಿಗಳು ಇರುವುದಿಲ್ಲ.

ದೇಶದಲ್ಲಿ ಪ್ರಸಾರ ಹೊಂದಿರುವ ಡಿಜಿಟಲ್ ಮಾಧ್ಯಮಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನೋಂದಣಿ ಇಲ್ಲದೆ ಖಾಸಗಿಯಾಗಿ ಪ್ರಸಾರ ಹೊಂದಿವೆ. ಉದಾಹರಣೆಗೆ ಪತ್ರಿಕೆಗಳು ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಫಾರ್ ಇಂಡಿಯ(RNI) ಅಡಿ ನೋಂದಣಿಯಾಗುತ್ತವೆ ಮತ್ತು ಉಪಗ್ರಹ TV ವಾಹಿನಿಗಳು ಪ್ರಸಾರ ಭಾರತಿಯಲ್ಲಿ ನೋಂದಣಿಯಾಗುತ್ತವೆ. ಇಂಟರ್ ನೆಟ್ ಆಧಾರಿತ ಡಿಜಿಟಲ್ ಮಾಧ್ಯಮಗಳು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಡುವುದಿಲ್ಲ. ಡಿಜಿಟಲ್ ಮಾಧ್ಯಮಗಳು ಖಾಸಗಿ ಸಂಸ್ಥೆಗಳ ಡೋಮೈನ್ ಗಳಲ್ಲಿ ನೋಂದಣಿಯಾಗಿ ಪ್ರಸಾರವಾಗುತ್ತಿವೆ. ಇದರಿಂದ ಡಿಜಿಟಲ್ ಮಾಧ್ಯಮಗಳನ್ನು ರಾಜ್ಯ ಸರ್ಕಾರದಿಂದ ನಿಯಂತ್ರಿಸುವುದು ಸಾಧ್ಯವಿಲ್ಲವಾದ್ದರಿಂದ ಡಿಜಿಟಲ್ ಮಾಧ್ಯಮಗಳಿಗೆ ಸರ್ಕಾರದಿಂದ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ವಿಭಾಗವು ನ್ಯೂಸ್ ಪೋರ್ಟಲ್/ ವೆಬ್ ಪೋರ್ಟಲ್ ಗಳಿಗೆ ಜಾಹೀರಾತು ದರವನ್ನು ನಿಗದಿಪಡಿಸಿದ್ದು, ಡಿಎವಿಪಿ ನಿಗದಿ ಪಡಿಸಿರುವ ದರಗಳಂತೆ ಇಲಾಖೆಯಿಂದ ಅಗತ್ಯ ಸಂದರ್ಭಗಳಲ್ಲಿ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಆದಾಗ್ಯೂ ಡಿಜಿಟಲ್ ಮಾಧ್ಯಮಗಳ ನೆರವಿಗಾಗಿ ಸರ್ಕಾರದಿಂದ ಕೇಂದ್ರ ಸರ್ಕಾರದ ಡಿಜಿಟಲ್ ಜಾಹೀರಾತು ಪಾಲಿಸಿ-2023ರ ಮಾದರಿಯಲ್ಲಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ಹಾಗೂ ಪ್ರಸ್ತುತ ರಾಜ್ಯ ಸರ್ಕಾರದ ಜಾಹೀರಾತು ನೀತಿಯ ಪರಿಷ್ಕರಣೆ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ತಿದ್ದುಪಡಿಗೆ ಪರಿಶೀಲಿಸಲಾಗುವುದು.

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಸಂಖ್ಯೆ: ಕೆಸಿಐ-ಪಿಐಪಿ/256/2023**